ವಿಸ್ತರಿಸಲು ೧೯೭೧ನೇ ಇಸವಿಯ ಕರ್ನಾಟಕ ಚಲನಚಿತ್ರ (ನಿಯಂತ್ರಣ) ನಿಯಮಗಳ ೨೮ (೧) ಹಾಗೂ (೨) ಹಾಗೂ ೩೬ನೇ ನಿಯಮಗಳಿಂದ ವಿನಾಯಿತಿ ನೀಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೧೬-೧೨-೮೯ ರಂದು ಹೊರಡಿಸಲಾದ ಹೆಚ್‌ಡಿ ೧೮೨ ಸಿಎನ್‌ಎ ೮೯ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

೨. ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮಿನಾನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

೮) ೧೯೮೯ನೇ ಇಸವಿಯ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆಯ ೪೮ (೫)ನೇ ಕಲಮಿನ ಮೇರೆಗೆ—

೧೯೮೬-೮೭ನೇ ಸಾಲಿಗೆ ಸಂಬಂಧಿಸಿದಂತೆ (೧) ಹುಬ್ಬಳ್ಳಿ-ಧಾರವಾಡ (೨) ಹಾಸನ (೩) ಬಿಜಾಪುರ ಹಾಗೂ (೪) ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರಗಳ ಲೆಕ್ಕ ಪರಿಶೋಧನಾ ವರದಿ.

೮) ೧೯೭೫ನೇ ಇಸವಿಯ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಲೆಕ್ಕ ನಿಯಂತ್ರಣಗಳ ೭ (೮) ನಿಯಮದ ಮೇರೆಗೆ—

೧೯೮೭-೮೮ನೇ ಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳ ಚರಂಡಿ ಮಂಡಳಿಯ ಲೆಕ್ಕಪತ್ರ ಹಾಗೂ ಲೆಕ್ಕ ಪರಿಶೋಧನಾ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

೩. ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮಿನಾನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು) ಶ್ರೀ ಬಿ ಶಿವಣ್ಣ (ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು) ಅವರ ಪರವಾಗಿ.—

೧೯೫೬ನೇ ಇಸವಿಯ ಕಂಪನಿಗಳ ಕಾಯ್ದೆಯ ೬೧೯ (೮) ಕಲಮಿನ ಮೇರೆಗೆ—

೧೯೮೮-೮೯ನೇ ಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ರೇಷ್ಮೆ ಕೈಗಾರಿಕಾ ನಿಯಮಿತದ ೯ನೇ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

೪. ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮಿನಾನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು) ಶ್ರೀ ಎ. ವೀರಪ್ಪ ಮೊಯ್ಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಯೋಜನೆ, ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವೆಗಳು, ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳು) ಅವರ ಪರವಾಗಿ.—

೧೯೮೮-೮೯ನೇ ಸಾಲಿಗೆ ಸಂಬಂಧಿಸಿದಂತೆ ಮೈಸೂರು ಕಾಸ್‌ಮೆಟಿಕ್ಸ್ ನಿಯಮಿತದ ೨೩ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು,— ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ಅರ್ಜಿಯನ್ನೊಪ್ಪಿಸುವುದು

ಶ್ರೀ ಕೆ. ಕುಶಾಲ (ಸುಳ್ಯ),— ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಆಯೋಗ ರಚಿಸುವ ಬಗ್ಗೆ ಅರ್ಜಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು.— ಅರ್ಜಿಯನ್ನು ಒಪ್ಪಿಸಲಾಯಿತು.

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ಗಂಧದ ಕಳ್ಳಸಾಗಾಣಿಕೆದಾರ, ಆನೆಗಳ ಹಂತಕ ವೀರಪ್ಪನ್‌ನನ್ನು ಹಿಡಿಯುವ ಬಗ್ಗೆ

ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ೪೯ನೇ ನಿಯಮಾವಳಿ ಕೆಳಗೆ ಒಂದು ನಿಲುವಳಿ ಸೂಚನೆ ಕಳಿಸಿದ್ದೇನೆ. ಬಹಳ ಮುಖ್ಯವಾದ ವಿಷಯ ಎತ್ತುತ್ತಿದ್ದೇವೆ.

ಅಧ್ಯಕ್ಷರು.—ಇಲ್ಲಿ ಕೇಳಿ, ತಾವು ಒಂದು ನಿಲುವಳಿ ಸೂಚನೆಯನ್ನು ಈ ದಿವಸ ಬೆಳಿಗ್ಗೆ ೧೦.೧೫ಕ್ಕೆ ವಿಧಾನಮಂಡಲದ ಕಚೇರಿಗೆ ತಲುಪಿಸಿದ್ದೀರಿ ೪೯ನೇ ನಿಯಮ ಏನು ಹೇಳುತ್ತದೆ ಎಂದರೆ...

(ಗದ್ದಲ)

ಶ್ರೀ ವಾಟಾಳ್ ನಾಗರಾಜ್ —ಅಧ್ಯಕ್ಷರೆ, ನಾವು ಎರಡು ದಿವಸ ಮುಂಚಿತವಾಗಿ ನಿಲುವಳಿ ಸೂಚನೆ ಕಳಿಸಿದ್ದೇವೆ. ತಾವು ಆ ನಿಲುವಳಿ ಸೂಚನೆಯನ್ನು ಗಮನ ಸೆಳೆಯುವ ಸೂಚನೆಯಾಗಿ ಮಾಡುತ್ತೇವೆಂದು ನನಗೆ ಪತ್ರ ಬರೆದಿದ್ದೀರಿ ಇದು ಬಹಳ ಗಂಭೀರವಾದ ವಿಚಾರ. ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕು.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ —ಇದರಲ್ಲಿ ಒಬ್ಬ ಆಡಳಿತ ಪಕ್ಷದ ಶಾಸಕರು ಇನ್‌ವಾಲ್ವ್ ಆಗಿದ್ದಾರೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು.—ನಾನು ಎರಡು ಪುಸ್ತಕಗಳನ್ನು ಹಿಡಿದುಕೊಂಡು ಕುಳಿತಿದ್ದೇನೆ ನೀವು ನನಗೆ ಅವಕಾಶವನ್ನೇ ಕೊಡುತ್ತಿಲ್ಲ. ಕೆಲವು ಮಾನ್ಯ ಸದಸ್ಯರು ನನ್ನನ್ನು ಬಂದು ಕೇಳಿದ್ದಾರೆ ಗಮನ ಸೆಳೆಯುವ ಸೂಚನೆ ಮೂಲಕ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳೋಣ ಎಂದು ಈಗಾಗಲೆ ತಮಗೆ ಕಾಗದದ ಮೂಲಕ ನನ್ನ ಕಚೇರಿ ತಿಳಿಸಿದೆ. ಆದುದರಿಂದ ಈ ನಿಲುವಳಿ ಸೂಚನೆ ಈಗ ಅಗತ್ಯ ಇಲ್ಲ ಎನ್ನುವುದು ಒಂದು. ಎರಡನೆಯದು...

ಶ್ರೀ ಡಿ ಬಿ. ಚಂದ್ರೇಗೌಡ —ಪುಸ್ತಕವನ್ನು ತೆಗೆದು ನೀವು ಈ ರೀತಿ ಹೇಳಿಬಿಟ್ಟರೆ ನಾವೇನು ಮಾಡುವುದಕ್ಕಾಗುತ್ತದೆ ? ಇದು ಬಹಳ ಗಂಭೀರವಾಗಿರತಕ್ಕಂಥ ಪ್ರಶ್ನೆ.

(ಗೊಂದಲ)

ಅಧ್ಯಕ್ಷರು.—ಸಮಸ್ಯೆ ಗಂಭೀರವಾಗಿರಬಹುದು, ಗಂಭೀರವಾಗಿಲ್ಲದಿರಬಹುದು, ನಿಲುವಳಿ ಸೂಚನೆಗಳನ್ನು ಕಳುಹಿಸತಕ್ಕಂಥದ್ದು ನಮ್ಮ ಹಕ್ಕು ಅದಕ್ಕೆ ಚ್ಯುತಿ ತರತಕ್ಕಂಥಾದ್ದು ನನ್ನ ವಿಚಾರ ಅಲ್ಲ. ಆದರೆ ಈ ನಿಲುವಳಿ ಸೂಚನೆಯನ್ನು ಆ ದಿವಸ ಸಭೆಯಲ್ಲಿ ಈವೆನ್ ಮೆನ್‌ಷನ್ ಮಾಡಬೇಕಾದರೂ ಕೂಡ ಹತ್ತು ಗಂಟೆಯ ಒಳಗೆ ನನ್ನ ಕಚೇರಿಗೆ ಅದು ತಲುಪಬೇಕಾಗಿತ್ತು. ಇವತ್ತು ಅದು ನನ್ನ ಕಛೇರಿಗೆ ಹತ್ತುಕಾಲು ಗಂಟೆಗೆ ಬಂದಿದೆ. ಆದುದರಿಂದ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ನಾವು ಅದನ್ನು ಎರಡು ದಿವಸ ಮುಂಚಿತವಾಗಿಯೇ ಕೊಟ್ಟಿದ್ದೇವೆ ಆರೆ ಗಂಟೆಗಳ ಮುಂಚೆ ನಾನು ಮಾನ್ಯ ಸಿಂಧ್ಯರವರು ಆ ಜನ ಕಳಿಸಿದ್ದೇವೆ ಮಾನ್ಯ ಏಕಾಂತಯ್ಯನವರೂ ಕಳಿಸಿದ್ದಾರೆ ಒಟ್ಟು ೧೦ ಜನ ಕಳಿಸಿದ್ದಾರೆ ಇವತ್ತಲ್ಲ ಆರೆ ಗಂಟೆಗಳ ಮುಂಚೆ ಕೊಟ್ಟಿದ್ದೇವೆ ಇದು ಬಹಳ ಪ್ರಮುಖವಾಗಿರತಕ್ಕಂಥಾದ್ದು ಇದು ದೇಶ ಮತ್ತು ರಾಜ್ಯ ಎರಡರ ಗಮನವನ್ನು ಸೆಳೆದಿರತಕ್ಕಂಥ ಪ್ರಶ್ನೆ ಇದಕ್ಕೆ ಅವಕಾಶ ಕೊಡಬೇಕು.

(ಗೊಂದಲ)

ಶ್ರೀ ಡಿ ಬಿ. ಚಂದ್ರೇಗೌಡ.—ಮುಖ್ಯವಾಗಿ ತಪ್ಪು ಕಛೇರಿಯಲ್ಲಿ ಏನು ಹತ್ತುಕಾಲು ಗಂಟೆಗೆ ನೋಟ್ ಆಗಿದೆ. ಗಡಿಯಾರದಲ್ಲಿ ಸ್ವಲ್ಪ ವ್ಯತ್ಯಾಸ ಇರಬಹುದು. ಪಂಕ್ಚೂಯೆಂದು ಆಗಿರಬಹುದು ಅಥವಾ ನಮ್ಮಿಂದಲೂ ತಪ್ಪಾಗಿರಬಹುದು ಆ ತಪ್ಪು ಆಗದ ಹಾಗೆ ನಾವು ಬಹಳ ಎಚ್ಚರಿಕೆವಹಿಸಿ ೯-೫೫ ಗಂಟೆಗೆ ಬಂದಿದ್ದೆವು. ಕಛೇರಿಯಲ್ಲಿ ತಪ್ಪಾಗಿದೆ ಎಂದು ನಾನು ಹೇಳುವುದಿಲ್ಲ. ಆದರೆ ಇಲ್ಲಿ ಮುಖ್ಯವಾಗಿರತಕ್ಕಂಥ ವಿಚಾರ ಏನೆಂದರೆ, ನಿಲುವಳಿ ಸೂಚನೆಯ ವ್ಯಾಪ್ತಿಯೊಳಗೆ ಯಾವುದಾದರೂ ವಿಷಯ ಬರತಕ್ಕಂಥಾದ್ದು. ಇದೆ ಅಂದರೆ ಇದಕ್ಕಿಂತಲೂ ಶ್ರೇಷ್ಠವಾಗಿ ಅದರ ಜೊತೆಗೆ ಹೋಗತಕ್ಕಂಥ ವಿಷಯ ಬೇರೆ ಇಲ್ಲ ಎಂದು ನಾನು ಭಾವನೆ ಮಾಡುತ್ತೇನೆ ಇದಕ್ಕೆ ಕಾರಣವೇನು ಎಂದರೆ, ಇದು ನಮ್ಮ ರಾಜ್ಯದ ಪ್ರತಿಷ್ಠೆ, ನಮ್ಮ ರಾಜ್ಯದ ಪ್ರತಿಷ್ಠೆ. ಈ ವಿಚಾರದ ಮೇಲೆ ಸೇರಿದೆ.

ಅಧ್ಯಕ್ಷರು.—ಏನು ಪ್ರತಿಷ್ಠೆ ಸೇರಿದೆ ?

ಶ್ರೀ ಡಿ ಬಿ. ಚಂದ್ರೇಗೌಡ.—ಆಳುವ ಪಕ್ಷದ ಸದಸ್ಯರಿಂದಲೇ ರಕ್ಷಣೆ ಸಿಕ್ಕಿದೆ ಎನ್ನತಕ್ಕಂಥದು ಪತ್ರಿಕೆಗಳ ಮೂಲಕ ನಮಗೆ ತಿಳಿಯುತ್ತಿದೆ. ಆದ್ದರಿಂದ ಇದಲ್ಲಾ ನಮಗೆ ಸಂಬಂಧಪಟ್ಟಿದ್ದಲ್ಲ ಎಂದು ತಾವು ಹೇಳುತ್ತೀರೇನು ? ೩೫ ಕೊಲೆ ಮಾಡಿದ್ದಾನೆ. ೩೫೦ ಆನೆಗಳನ್ನು ಕೊಂದಿದ್ದಾನೆ. ೨೫ ಕೋಟಿ ರೂಪಾಯಿ ಗಂಧವನ್ನು ಮಾರಿದ್ದಾನೆ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ದರೋಡೆ ನಡೆಸಿದ್ದಾನೆ...

(ಗೊಂದಲ)

MR. SPEAKER.—May I draw your kind attention to this simple sentence...

ಶ್ರೀ ಪಿ.ಜಿ.ಆರ್. ಸಿಂಧ್ಯ.—ತಾವು ರೂಲಿಂಗ್ ಕೊಡುವುದಕ್ಕಿಂತ ಮುಂಚಿತವಾಗಿ ಒಂದು ನಿಮಿಷ...

ಅಧ್ಯಕ್ಷರು.—ನಾನು ರೂಲಿಂಗ್ ಕೊಡುತ್ತಿಲ್ಲ ತಮ್ಮ ಅವಗಾಹನೆಗೆ ಏನು ತರುತ್ತಿದ್ದೇನೆಂದರೆ. 'In a appropriate case the Speaker may admit a calling attention notice in lieu of notice of adjournment motion'... which has already been done and it is coming up. So I cannot understand your anxiety to insist on adjournment motion.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ತಾವು ಮಾಡಿದ್ದೀರಿ. ನಮಗೆ ಪತ್ರವನ್ನೂ ಬರೆದಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಇವತ್ತು ಬೆಳಿಗ್ಗೆ ೯-೪೫ ಗಂಟೆಗೆ ಕೊಟ್ಟಿದ್ದಾರೆ. ಆದರೆ ನಾವು ನಿಲುವಳಿ ಸೂಚನೆಯನ್ನು ಶುಕ್ರವಾರ ಸಾಯಂಕಾಲ ೫ ಗಂಟೆಗೆ ಕೊಟ್ಟಿದ್ದೇವೆ ಮತ್ತು ಕಾರ್ಯದರ್ಶಿಗಳಿಗೂ ಕೂಡಾ ಕೊಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಗೈರು ಹಾಜರಿ ಇದ್ದುದರಿಂದ ಸಂಬಂಧಪಟ್ಟ ಮಂತ್ರಿಗಳಿಗೆ ಅಂದರೆ ಲೋಕೋಪಯೋಗಿ ಸಚಿವರು ಇವತ್ತು ಸದನದಲ್ಲೇ ಇದ್ದರು, ಅವರಿಗೆ ಕೊಟ್ಟಿದ್ದೇವೆ. ಮತ್ತು ತವಂಗೂ ಸಹಾ ಕೊಟ್ಟಿದ್ದೇವೆ. ತಮ್ಮ ಜೊತೆಯಲ್ಲಿ ಚರ್ಚೆಯನ್ನೂ ಮಾಡಿದ್ದೇವೆ.

ಅಧ್ಯಕ್ಷರು.—ಮಾನ್ಯ ಸದಸ್ಯರೇ, ಈ ಪ್ರಶ್ನೆ ನಾಳೆ ಬರುತ್ತಾ ಇದೆ. ಆದುದರಿಂದ ಆತುರ ಏತಕ್ಕೆ ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ರಾಜ್ಯದಲ್ಲಿ ಬಹಳ ಗಂಭೀರವಾದಂಥ ಪರಿಸ್ಥಿತಿ ನಿರ್ಮಾಣವಾಗಿದೆ ಇಂಥ ಪರಿಸ್ಥಿತಿ ಎಂದೂ ಬಂದಿರಲಿಲ್ಲ. ಕರ್ನಾಟಕ ರಾಜ್ಯದಲ್ಲಿ ಎಂದೂ ಇಂಥ ಪರಿಸ್ಥಿತಿ ಉದ್ಭವವಾಗಿರಲಿಲ್ಲ...

(ಗೊಂದಲ)

ಶ್ರೀ ವೀರೇಂದ್ರ ಪಾಟೀಲ್.— ತಾವು ದಯವಮಾಡಿ ಶಾಂತ ರೀತಿಯಿಂದ ಕೇಳುತ್ತೀವಿ ಅಂದರೆ ಹೇಳಬಹುದು. ವೀರಪ್ಪನ್ ಗ್ಯಾಂಗ್ ಇರಬಹುದು ಅಥವಾ ಬೇರೆ ಯಾವುದೇ ಹೆಸರಿನಲ್ಲಿ ಗ್ಯಾಂಗ್ ಇರಬಹುದು. ಅದು ಇವೊತ್ತು ತಮಿಳುನಾಡಿನ ಮತ್ತು ಕರ್ನಾಟಕದ ಬಾರ್ಡರ್‌ನಲ್ಲಿ ಅನೇಕ ವರ್ಷಗಳಿಂದ ಆಪರೇಟ್ ಮಾಡುತ್ತಾ ಇದೆ. ಇತ್ತೀಚೆಗೆ ಮೂರು-ನಾಲ್ಕು ತಿಂಗಳುಗಳಿಂದ ಆ ಗ್ಯಾಂಗನ್ನು ಹಿಡಿಯಲಿವುದಕ್ಕೆ ಎಲ್ಲಾ ತರಹದ ಪ್ರಯತ್ನಗಳು ಆಗುತ್ತಿವೆ. ಇದರ ಬಗ್ಗೆ ಮಾನ್ಯ ಸದಸ್ಯರು ಚರ್ಚೆಯನ್ನು ಮಾಡುತ್ತೇವೆ ಅಂದರೆ ನನಗೆ ಯಾವುದೂ ಅಡ್ಡಿ ಇಲ್ಲ. ಏಕೆಂದರೆ, ಇವತ್ತು ಆ ಕಡೆ ಇರುವಂತಹ ಮಾನ್ಯ ಸದಸ್ಯರು ಎದ್ದು ಹೇಳುವುದು ನೋಡಿದರೆ ಸರ್ಕಾರ ಏನೋ ಮುಚ್ಚಿಕೊಳ್ಳುವ ಪ್ರಯತ್ನ ಮಾಡುತ್ತಾ ಇದೆ ಎಂಬ ಭಾವನೆ ಇರುವ ಹಾಗೆ ಕಾಣುತ್ತಿದೆ. ಅದು ಇಲ್ಲ, ಇದರ ಬಗ್ಗೆ ಎಲ್ಲವನ್ನೂ ಹೇಳುವುದಕ್ಕೂ ನಾನು ತಯಾರು ಇದ್ದೇನೆ, ಚರ್ಚೆ ಮಾಡುವುದಕ್ಕೂ ತಯಾರು ಇದ್ದೇನೆ. ಮತ್ತು ಮಾನ್ಯ ಸಭಾಧ್ಯಕ್ಷರು ಈಗಾಗಲೆ ಕಾಲಿಂಗ್ ಅಟೆನ್‌ಷನಗೆ ಈ ವಿಷಯವನ್ನು ಕನ್‌ವರ್ಟ್ ಮಾಡಿದ್ದಾರೆ. ನಾಳೆ ಬೆಳಿಗ್ಗೆ ಕಾಲಿಂಗ್ ಅಟೆನ್‌ಷನ್‌ನಲ್ಲಿ ನಾನು ಸ್ಟೇಟ್‌ಮೆಂಟ್ ಮಾಡಿದ ಮೇಲೆ ತಾವು ಬೇಕಾದ್ದು ಕೇಳಬಹುದು. ನನ್ನಲ್ಲಿರುವ ಇನ್‌ಫರ್ಮೇಷನ್ ಕೊಡುವುದಕ್ಕೆ ನಾನು ತಯಾರು ಇದ್ದೇನೆ. ಅನೇಕ ವರ್ಷಗಳಿಂದ ಆಪರೇಟ್ ಮಾಡುವಂಥ ಗ್ಯಾಂಗಿನ ಬಗ್ಗೆ ೨ಳಿ ಗಂಟೆಯು ಕಾಯಲಿಕ್ಕೆ ತಯಾರಿಲ್ಲ. ಎಂದರೆ ಸಾರ್ವಜನಿಕ ಕುತೂಹಲಕ್ಕೆ ಮತ್ತೊಂದು ಅರ್ಥ ಬರಬೇಕಾದಂಥ ಪರಿಸ್ಥಿತಿ ಬರಂತ್ತದೆ. ಅದಕ್ಕಾಗಿ ತಾವೆಲ್ಲರೂ ಶಾಂತಚಿತ್ತದಿಂದ ನಾಳಿನ ಕಾಲಿಂಗ್ ಅಟೆನ್‌ಷನ್‌ಗೆ ಕಾಯಿರಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೆಗೌಡ.—ನಮಗೆನೂ ಕುತೂಹಲ ಇಲ್ಲ. ನಿಮಗೆ ಕೆಟ್ಟ ಹೆಸರು ಬರುತ್ತಾ ಇದೆ ಎನ್ನುವುದೇ ನಮಗೆ ಸಂಕಟ. ನಿಮ್ಮ ಪಕ್ಷದವರು ಸೇರಿದ್ದಾರೆಂದು ಕೆಟ್ಟ ಹೆಸರು ಬರಂತ್ತಿದೆ. ಅದಾಗ ಬಾರದು ಎನ್ನುವುದು ನಮ್ಮ ಉದ್ದೇಶ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯಮಂತ್ರಿಗಳು ಪ್ರತಿಯೊಂದಕ್ಕೂ ಅರ್ಥ ಕಲ್ಪಿಸ ಬಾರದು. ನಾವು ಯಾವ ಅರ್ಥ ಇಟ್ಟುಕೊಂಡಿಲ್ಲ. ಇದು ಪ್ರಾಮಾಣಿಕವಾದಂಥ ಪ್ರಯತ್ನ ರಾಜ್ಯದಲ್ಲಿ ಅನ್ಯಾಯ ನಡೆದಿದೆ. ಇದು ಬಹಳ ಗುರುತರವಾಗಿದೆ. ಇದು ಬರೀ ರಾಜ್ಯಕ್ಕೆ ಸಂಬಂಧಪಟ್ಟಿದ್ದಲ್ಲ, ಇಡೀ ದೇಶಕ್ಕೆ ಗೊತ್ತಾಗಿದೆ ಮತ್ತು ನಮ್ಮ ಪೋಲೀಸರು ಏಟು ತಿಂದು ಬಂದಿದ್ದಾರೆ. ಕತೆಗಳು ನಡೆದಿದೆ. ಇದು ಕತೆ, ಕಲ್ಪನೆ ಏನಲ್ಲ.

ಅಧ್ಯಕ್ಷರು.—ನಾಳೆ ಚರ್ಚೆ ಮಾಡೋಣ ಅವರು ಸ್ಟೇಟ್‌ಮೆಂಟ್ ಮಾಡುತ್ತಾರೆ. ತಾವು ಕೂಡ ಆದರ ಮೇಲೆ ಕ್ಲಾರಿಫಿಕೇಷನ್ಸ್ ಕೇಳಬಹುದು.

ಗಮನ ಸೆಳೆಯುವ ಸೂಚನೆಗಳು

೧. ದ. ಕ. ಜಿಲ್ಲೆಯ ಸುಳ್ಯ ಪಟ್ಟಣಕ್ಕೆ ನೀರು ಸರಬರಾಜು ಯೋಜನೆ ಮಂಜೂರು ಬಗ್ಗೆ

ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಅಧ್ಯಕ್ಷರೇ, ಸುಳ್ಯ ಪಟ್ಟಣಕ್ಕೆ ನೀರು ಸರಬರಾಜು ಯೋಜನೆ ಮಂಜೂರಾಗಿ ಐದು ವರ್ಷಗಳು ಕಳೆದರೂ, ಇದುವರೆವಿಗೂ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರದೇ ಇರುವುದರಿಂದಾಗಿ ಸಾರ್ವಜನಿಕರಿಗೆ ತೊಂದರೆ ಆಗಿರುವ ಬಗ್ಗೆ ಮಾನ್ಯ ಬಂದರು, ಮಿನುಗಾರಿಕೆ, ವಸತಿ ಹಾಗೂ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಟಿ.ಎನ್. ನರಸಿಂಹ ಮೂರ್ತಿ (ಮಾನ್ಯ ಬಂದರು, ಮಿನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ. ಮಾನ್ಯ ಸದಸ್ಯರಾದ ಶ್ರೀ ಕೆ. ಕುಶಾಲ ಅವರು ಸುಳ್ಯ ಪಟ್ಟಣದ ನೀರು ಸರಬರಾಜಿನ ಬಗ್ಗೆ ಗಮನ ಸೆಳೆದಿರುವ ಸೂಚನೆಗೆ ಸರ್ಕಾರದ ವತಿಯಿಂದ ಈ ರೀತಿ ಉತ್ತರ ಇದೆ.

ಸುಳ್ಯ ಪಟ್ಟಣವು ದಕ್ಷಿಣ ಕನ್ನಡ ಜಿಲ್ಲೆಯ ತಾಲೂಕು ಕೇಂದ್ರವಾಗಿದ್ದು ೧೯೮೧ರ ಜನಗಣತಿಯು ಪ್ರಕಾರ ೧೯,೩೮೯ ಜನಸಂಖ್ಯೆ ಇದ್ದು, ಈಗಿನ ಜನಸಂಖ್ಯೆಯು ಸುಮಾರು ೧೪,೦೦೦ ವಾಗಿರುತ್ತದೆ.

ಸುಳ್ಯ ಪಟ್ಟಣಕ್ಕೆ ಪಯಸ್ವನಿ ನದಿಯಿಂದ ಒಂದು ಯೋಜನೆಯನ್ನು ಕೈಗೊಂಡು ೧೯೭೩ ರಲ್ಲಿ ಪೂರೈಸಿ ನೀರು ಸರಬರಾಜು ಮಾಡಲಾಗುತ್ತಿತ್ತು. ಈ ಯೋಜನೆಯನ್ನು ೧೪ ೦೦೦ ಜನಸಂಖ್ಯೆಗೆ ದಿನಂಪ್ರತಿ ತಲಾ ೪೫ ಲೀಟರ್‌ನಂತೆ ನೀರು ಸರಬರಾಜು ಮಾಡಲು ಯೋಜಿಸಲಾಗಿತ್ತು.

ಸುಳ್ಯ ಪಟ್ಟಣದ ಅಭಿವೃದ್ಧಿಯನ್ನು ಮತ್ತು ಅದರ ಜನಸಂಖ್ಯೆ ಹೆಚ್ಚುವರಿಯನ್ನು ಗಮನದಲ್ಲಿಟುಕೊಂಡು ಈ ಪಟ್ಟಣಕ್ಕೆ ಒಂದು ಅಭಿವೃದ್ಧಿ ಯೋಜನೆಯನ್ನು ಸರ್ಕಾರಿ ಆಜ್ಞೆ ಸಂಖ್ಯೆ : ವನಇ ೧೬ ಯು ಡಬ್ಲ್ಯು ಎಸ್ ೮೫ ದಿನಾಂಕ ೧೮-೬-೮೫ ರಲ್ಲಿ ರೂ. ೨೬.೦೦ ಲಕ್ಷಗಳ ಅಂದಾಜನ್ನು ಆಡಳಿತಾತ್ಮಕ ಮಂಜೂರು ಮಾಡಲಾಯಿತು ಈ ಯೋಜನೆಯನ್ನು ೨೦೧೧ನೇ ಇಸವಿಯಲ್ಲಿ ೨೦,೦೦೦ ಜನ ಸಂಖ್ಯೆಗೆ ದಿನಂಪ್ರತಿ ತಲಾ ೧೦೦ ಲೀಟರ್‌ನಂತೆ ನೀರು ಸರಬರಾಜು ಮಾಡಲು ಯೋಜಿಸಲಾಗಿದೆ.

ಈ ಯೋಜನೆಗೂ ಪಯಸ್ವನಿ ನದಿಯನ್ನು ಮೂಲವಾಗಿಟ್ಟುಕೊಂಡು ಯೋಜಿಸಲಾಗಿದೆ.

ಈ ಯೋಜನೆಯಲ್ಲಿ ಶುದ್ಧೀಕರಣಾಗಾರದ ಕಾಮಗಾರಿ ಹಾಗೂ ೬೦ ಅಶ್ವಶಕ್ತಿಯ ವಿದ್ಯುತ್ ಸ್ಟ್ಯಾಂಡ್ ಬೈ ಪಂಪನ್ನು ಅಳವಡಿಸುವ ಕಾಮಗಾರಿ ಬಿಟ್ಟು ಉಳಿದೆಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಮತ್ತು ಈ ಯೋಜನೆಯಂತೆ ಈ ಪಟ್ಟಣಕ್ಕೆ ದಿನಂಪ್ರತಿ ತಲಾ ೫೮ ಲೀಟರ್‌ನಂತೆ ಫೆಬ್ರವರಿ ೯೦ ರಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಈ ಹಿಂದೆ ಶುದ್ಧೀಕರಣಾಗಾರದ ಕಾಮಗಾರಿಗೆ ೨ ಭಾರಿ ಟೆಂಡರು ಕರೆಯಲಾಗಿದ್ದು, ನಮೂದಿಸಿರುವ ದರಗಳು ಅಧಿಕವಾಗಿದ್ದುದರಿಂದ ಟೆಂಡರುಗಳನ್ನು ತಿರಸ್ಕೃತಗೊಳಿಸಲಾಯಿತು. ಈ ಕಾಮಗಾರಿಗೆ ಮತ್ತೊಮ್ಮೆ ಟೆಂಡರ್ ಕರೆಯಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ ಹಾಗೂ ೬೦ ಅಶ್ವಶಕ್ತಿಯ ಸ್ಟ್ಯಾಂಡ್ ಬೈ ಪಂಪನ್ನು ಖರೀದಿಸಿ ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.